3. ಶ್ರೀ ಗಂಧದ ಕಾವಲು ಚೌಡೇಶ್ವರಿ ವಿದ್ಯಾ ಸಂಸ್ಥೆ ಸುಂಕದ ಕಟ್ಟೆ, ಬೆಂಗಳೂರು. (ಕನ್ನಡ ಮತ್ತು ಆಂಗ್ಲ)
4. ಶ್ರೀ ಬಾಲಗಂಗಾಧರ ತಿಲಕ್ ಶಿಕ್ಷಣ ಸಂಸ್ಥೆ ಪೀಣ್ಯ ಬೆಂಗಳೂರು. (ಕನ್ನಡ ಮತ್ತು ಆಂಗ್ಲ)
5. ಪವನ್ ವಿದ್ಯಾ ಸಂಸ್ಥೆ ಶೇಷಾದ್ರಿಪುರಂ, ಬೆಂಗಳೂರು.
6. ಯಾದವ ಏಜುಕೇಷನ್ ಸೊಸೈಟಿ, ಆರ್.ಟಿ. ನಗರ, ಬೆಂಗಳೂರು.

ಗುಲ್ಬರ್ಗಾ ಜಿಲ್ಲೆ.

1. ಆದರ್ಶ ಎಜುಕೇಷನ್ ಟ್ರಸ್ಟ್, ಗುಲ್ಬರ್ಗಾ.
2. ಶ್ರೀ ಸರ್ದಾರ ವಲ್ಲಬಾಯಿ ಪಟೇಲ್ ಮೆಮೋರಿಯಲ್ ಶಿಕ್ಷಣ ಸಂಸ್ಥೆ, ಗುಲ್ಬರ್ಗಾ.

ಹಾಸನ ಜಿಲ್ಲೆ.

1. ಹೇಮಾವತಿ ವಿದ್ಯಾ ಸಂಸ್ಥೆ, ಚನ್ನರಾಯಪಟ್ಟಣ.

ಧಾರವಾಡ ಜಿಲ್ಲೆ.

1. ಆರ್. ಎಲ್. ಎಸ್. ಸಂಯುಕ್ತ ಪದವಿ ಪೂರ್ವ ಕಾಲೇಜು, ಧಾರವಾಡ.

ಮೈಸೂರು.

1. ಲಯನ್ಸ್ ಇಂಟರ್‌ನ್ಯಾಷನಲ್ ತಿಲಕ್‌ನಗರ, ಮೈಸೂರು.
2. ಅಮರಭಾರತಿ ಎಜುಕೇಷನ್ ಸೊಸೈಟಿ, ರಾಜೇಂದ್ರನಗರ, ಮೈಸೂರು.

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ನಗರದಲ್ಲಿ ಕಟ್ಟುತ್ತಿರುವ 30 ಹಾಸಿಗೆಯ ಆಸ್ಪತ್ರೆಯ ಕಟ್ಟಡ ಕೆಲಸವನ್ನು ಪ್ರಾರಂಭಿಸುವುದು

329 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲ ಹೊಂಗಲ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಳಗಾವಿ ಜಿಲ್ಲೆಯ ಬೈಲಹೊಂಗಲ ನಗರದಲ್ಲಿ ಕಟ್ಟುತ್ತಿರುವ ಆಸ್ಪತ್ರೆಯ ಕಟ್ಟಡದ ಕೆಲಸವು ಏಪ್ರಿಲ್ 90ರಿಂದ ಸ್ಥಗಿತಗೊಂಡ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ? 1990 ಏಪ್ರಿಲ್ ತಿಂಗಳವರೆಗೆ ಕಟ್ಟಡ ನಿರ್ಮಾಣಕ್ಕೆ ಆದ ಖರ್ಚು ಎಷ್ಟು?*

ಆ) *ಆಸ್ಪತ್ರೆಯ ಕಟ್ಟಡ ಕಟ್ಟುವ ಕೆಲಸವನ್ನು ಪ್ರಾರಂಭಿಸಲು ಸರ್ಕಾರದವರು ಯಾವ ಕ್ರಮವನ್ನು ಕೈಗೊಂಡಿರುವರು?*

ಇ) *ಈ ಕೆಲಸವನ್ನು ಮುಗಿಸಲು ಇನ್ನೂ ಎಷ್ಟು ದಿನಗಳು ಬೇಕಾಗುವುದದು?*

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಸಚಿವರು):

ಅ) ಕೆಲಸವು ಸ್ಥಗಿತವಾಗಿಲ್ಲ. ಕಟ್ಟಡದ ಕೆಲಸ ಪ್ರಗತಿಯಲ್ಲಿದೆ. 1990 ಏಪ್ರಿಲ್ ತಿಂಗಳವರೆಗೆ ರೂ. 14.50 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಆ) ಉದ್ಭವವಾಗುವುದಿಲ್ಲ.

ಇ) ಸಾಕಷ್ಟು ಅನುದಾನವನ್ನು ಜಿಲ್ಲಾ ಪರಿಷತ್ ಒದಗಿಸುವುದರ ಮೇರೆಗೆ ಅವಲಂಬಿಸಿದೆ.